146ನೇ ಅಧಿವೇಶನ
ನಿ-330
ಕ್ರ-117
ಉತ್ತರ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಲೀಂ ಅಹಮದ್ ಇವರು ನಿಯಮ 330ರಡಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ**

* * * * *

ವಿಷಯ:

ಕೋವಿಡ್-19ರ ಮಹಾಮಾರಿಯ ತುರ್ತು ಸಂದರ್ಭದಲ್ಲಿ ರಾಜ್ಯದ ಜನತೆ ಆರೋಗ್ಯದ ವಿಚಾರದಲ್ಲಿ ಸಂಕಷ್ಟದಲ್ಲಿ ಸಿಲುಕಿದ್ದಾಗ, ಈ ಆರೋಗ್ಯದ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಸರ್ಕಾರದಲ್ಲಿ ಅಗತ್ಯ ವೈದ್ಯರುಗಳ ಸಂಖ್ಯೆಯು ಕಡಿಮೆಯಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಅನೇಕ ಎಂ.ಬಿ.ಬಿ.ಎಸ್. ವೈದ್ಯರನ್ನು ಬಳಸಿಕೊಳ್ಳಲು ಸಾಧ್ಯವಾಗದ ಸಮಯದಲ್ಲಿ ಆಯುಷ್ ಹಾಗೂ ದಂತ ವೈದ್ಯರುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ತಮ್ಮ ಆರೋಗ್ಯ ದೃಷ್ಟಿಯನ್ನು ಬದಿಗೊತ್ತಿ, ಜನರ ಸೇವೆಗೆ ಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯಕ್ಕೆ ನೇಮಕಗೊಂಡಿದ್ದರು. ಈ ನೇಮಕಗೊಂಡ ವೈದ್ಯರಿಂದಲೇ 1, 2 ಹಾಗೂ 3ನೇ ಅಲೆಗಳನ್ನು ಸತತವಾಗಿ ಸರ್ಕಾರದಿಂದ ಯಶಸ್ವಿಯಾಗಿ ನಿಭಾಯಿಸಲಾಗಿದೆ.

ಪ್ರಸ್ತುತ ಕೋವಿಡ್-19 ಕಡಿಮೆಯಾಗಿರುವ ಹಿನ್ನೆಲೆಯಲ್ಲಿ, ಆರೋಗ್ಯ ತುರ್ತು ಸಮಯದಲ್ಲಿ ಸದರಿ ವೈದ್ಯರುಗಳು ಸಲ್ಲಿಸಿದ ಸೇವೆಯನ್ನು ಗಣನೆಗೆ ತೆಗೆದುಕೊಳ್ಳದೇ, ಸೇವೆಯಿಂದ ಬಿಡುಗಡೆಗೊಳಿಸುತ್ತಿರುವುದು ಅವಮಾನೀಯ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಆಯುಷ್ ಹಾಗೂ ದಂತ ವೈದ್ಯರುಗಳ ಸೇವೆಯನ್ನು ಮುಂದುವರೆಸಲು ಮಹಾನಗರ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಪ್ರಾರಂಭಿಸಲಿರುವ ನಮ್ಮ ಕ್ಲಿನಿಕ್ (ಹೆಲ್ತ್ ಅಂಡ್ ವೆಲ್‌ನೆಸ್) ಸೆಂಟರ್‌ಗಳಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವ ವಿಚಾರವನ್ನು ನಿಯಮ 330ರ ಅಡಿಯಲ್ಲಿ ಸದನದಲ್ಲಿ ಚರ್ಚಿಸಲು ಅನುಮತಿಯನ್ನು ಕೋರುತ್ತೇನೆ.

ಉತ್ತರ:-

ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಸಿ ಅಂಡ್ ಆರ್ 2020, ದಿನಾಂಕ: 30-03-2020 ಮತ್ತು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯರವರ ಸುತ್ತೋಲೆ ಸಂಖ್ಯೆ: ಮುಲೆಪಅ(ಅ)/ಆಡಿ/ಕೋವಿಡ್-19 ಗು.ಹೊ. ಮುಂದುವರಿಕೆ/117/2021-2022, ದಿನಾಂಕ: 29/01/2022ರ ಆದೇಶದ ಉಲ್ಲೇಖದಲ್ಲಿ ಉಲ್ಲೇಖಿಸಿರುವ ವಿವಿಧ ಆದೇಶಗಳನ್ವಯ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್-19ರ 1, 2 ಹಾಗೂ 3ನೇ ಅಲೆಗಳಲ್ಲಿ ಸಮರ್ಪಕವಾಗಿ ನಿರ್ವಹಿಸಲು ವಿವಿಧ ಹಂತಗಳಲ್ಲಿ ಆಯುಷ್ ಹಾಗೂ ದಂತ ವೈದ್ಯರ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಅಗತ್ಯಗನುಗುಣವಾಗಿ ನೇಮಕ ಮಾಡಿಕೊಳ್ಳಲಾಗಿರುತ್ತದೆ.

ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆಯಾಗಿರುವುದರಿಂದ, ಆರೋಗ್ಯ ಇಲಾಖೆಯ ಸಾರ್ವಜನಿಕ ಆರೋಗ್ಯ ವಿಭಾಗದಡಿಯಲ್ಲಿ ಕೋವಿಡ್-19 ನಿಯಂತ್ರಣ ಚಟುವಟಿಕೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಆಯುಷ್ ಹಾಗೂ ದಂತ ವೈದ್ಯರ ಸೇವೆಯನ್ನು ವಲಯ ಮಟ್ಟಗಳಲ್ಲಿ ಅಗತ್ಯಗನುಗುಣವಾಗಿ ಪಡೆಯುತ್ತಿದ್ದು, ದಿನಾಂಕ: 21-03-2022ಕ್ಕೆ 176 ದಂತ ವೈದ್ಯರು ಹಾಗೂ 126 ಆಯುಷ್ ವೈದ್ಯಾಧಿಕಾರಿಗಳು ಪಾಲಿಕೆಯ 08 ವಲಯಗಳಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಸರ್ಕಾರದ ಆದೇಶದನ್ವಯ ನೇಮಕಾತಿ ಅವಧಿಯನ್ನು ದಿನಾಂಕ: 01-09-2021 ರಿಂದ 31-03-2022ರ ಅಂತ್ಯಕ್ಕೆ ವಿಸ್ತರಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ನಮ್ಮ ಕ್ಲಿನಿಕ್ (ಹೆಲ್ತ್ ಅಂಡ್ ವೆಲ್‌ನೆಸ್ ಸೆಂಟರ್‌ಗಳನ್ನು) ಪ್ರಾರಂಭಿಸಲು 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದ್ದು, ನಮ್ಮ ಕ್ಲಿನಿಕ್‌ಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ನಿಯಮಾನುಸಾರ ಕ್ರಮವಹಿಸಲಾಗುವುದು.

---

**ಸಂಖ್ಯೆ: ನಅಇ 72 ಬಿಬಿಎಲ್ 2022(ಇ)**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ